# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **26**
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 08-12-2025
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ವಿದ್ಯುತ್ ವಿತರಣಾ (ಎಸ್ಕಾಂಗಳು) ಸಂಸ್ಥೆಗಳಲ್ಲಿ ಸಿಬ್ಬಂದಿಗಳ ಕೊರತೆಯಿದೆಯೇ; ಇದ್ದರೇ ಯಾವ ಯಾವ ಎಸ್ಕಾಂಗಳಲ್ಲಿ ಸಿಬ್ಬಂದಿಗಳ ಕೊರತೆಯಿದೆ; | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಕ್ಟೋಬರ್-2025ರ ಅಂತ್ಯಕ್ಕಿರುವಂತೆ ಗ್ರೂಪ್ ವಾರು ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯದ ವಿವಿಧ ವಿದ್ಯುತ್ ವಿತರಣಾ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿ ಮತ್ತು ನಿರ್ವಹಣೆ ಯಾವ ನಿಯಮಗಳನ್ವಯ ನಡೆಯುತ್ತಿದೆ ಮತ್ತು ಈ ನೇಮಕಾತಿಗಳು ರಾಜ್ಯ ಮಟ್ಟದ ನೇಮಕಾತಿಗಳೇ ಅಥವಾ ಸ್ಥಳೀಯ ಮಟ್ಟದ ನೇಮಕಾತಿಗಳೇ; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳನ್ವಯ ನೇಮಕಾತಿಯನ್ನು ಮಾಡಲಾಗುತ್ತಿದೆ. ಗುಂಪು 'ಎ' ಮತ್ತು 'ಬಿ' ಪದವೃಂದದ ಹುದ್ದೆಗಳು ರಾಜ್ಯಮಟ್ಟದ್ದಾಗಿರುತ್ತದೆ ಹಾಗೂ ಗುಂಪು 'ಸಿ ಮತ್ತು 'ಡಿ' ಪದವೃಂದದ ಹುದ್ದೆಗಳು ಕ್ರಮವಾಗಿ ವೃತ್ತ ಮತ್ತು ವಿಭಾಗೀಯ ಮಟ್ಟದ್ದಾಗಿರುತ್ತದೆ. |
| ಇ) | ಸದರಿ ಸಂಸ್ಥೆಗಳ ನೇಮಕಾತಿಯಾದ ಸಿಬ್ಬಂದಿಗಳನ್ನು ವಿವಿಧ ಎಸ್ಕಾಂಗಳ ನಡುವೆ (inter-Escoms) ವರ್ಗಾವಣೆ ಮಾಡಲು ಅವಕಾಶವಿದೆಯೇ; | ಸಾಮಾನ್ಯ ಜ್ಯೇಷ್ಠತಾ ನಿಯಮ 2024 ನ್ನು ದಿನಾಂಕ: 10.01.2025 ರಿಂದ ಜಾರಿಗೊಳಿಸಲಾಗಿದ್ದು, ಸದರಿ ದಿನಾಂಕದ ನಂತರದ ಅವಧಿಯಲ್ಲಿ ಎಸ್ಕಾಂಗಳ ನಡುವೆ ವರ್ಗಾವಣೆ ಮಾಡಲು ಅವಕಾಶವಿರುತ್ತದೆ. |
| ಈ) | ಪ್ರಸ್ತುತ ರಾಜ್ಯ ಮಟ್ಟದಲ್ಲಿ ವಿದ್ಯುತ್ ವಿತರಣಾ ಸಂಸ್ಥೆಗಳಲ್ಲಿ ನೇಮಕಾತಿಯಾದ ಹೆಚ್ಚಿನ ಸಿಬ್ಬಂದಿಗಳು ಪರೀಕ್ಷಾರ್ಥ ಅವಧಿ ಘೋಷಣೆಯಾದ ನಂತರ ವರ್ಗಾವಣೆ ಮೂಲಕ ತಮ್ಮ ತವರು ಜಿಲ್ಲೆಗಳಿಗೆ ವಾಪಸ್ಸಾಗುತ್ತಿರುವುದರಿಂದ ಕೆಲ ವಿದ್ಯುತ್ ವಿತರಣಾ ಸಂಸ್ಥೆಗಳಲ್ಲಿ ಸಿಬ್ಬಂದಿಗಳ ತೀವ್ರ ಕೊರತೆಯಾಗುತ್ತಿರುವುದನ್ನು ಪರಿಹರಿಸುವ ಬಗ್ಗೆ ನಂತರ ಯಾವ ಕ್ರಮ ವಹಿಸುತ್ತಿದೆ; | ವರ್ಗಾವಣೆ ಮನವಿಗಳನ್ನು ಪರಿಗಣಿಸುವಾಗ, ಗುಂಪು-'ಸಿ' ಹುದ್ದೆಗಳಿಗೆ ಕನಿಷ್ಠ 4 ವರ್ಷ ಹಾಗೂ ಗುಂಪು-'ಡಿ' ಹುದ್ದೆಗಳಿಗೆ ಕನಿಷ್ಠ 7 ವರ್ಷ ಸೇವೆ ಪೂರ್ಣಗೊಳಿಸಿದ ನೌಕರರನ್ನು ಮಾತ್ರ ಪರಿಗಣಿಸಲಾಗುತ್ತಿದೆ. ಮುಂದುವರೆಯುತ್ತಾ ಕಾಲಕಾಲಕ್ಕೆ ಅಗತ್ಯತೆಗೆ ಅನುಗುಣವಾಗಿ ನೇರ ನೇಮಕಾತಿ ಮತ್ತು ಬಡ್ತಿ ಮೂಲಕ ವರ್ಗಾವಣೆಯಿಂದ ತೆರವುಗೊಳಗಾದ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. |
| ಉ) | ಮುಂದಿನ ದಿನಗಳಲ್ಲಿ ಆಯಾಯ ವಿದ್ಯುತ್ ವಿತರಣಾ ಸಂಸ್ಥೆಗಳ ವ್ಯಾಪ್ತಿಯ ಜಿಲ್ಲೆಗಳ ಅಭ್ಯರ್ಥಿಗಳನ್ನೇ ನೇಮಕಾತಿ ಮಾಡುವ ನಿಯಮಗಳನ್ನು ಜಾರಿಗೊಳಿಸುವಲ್ಲಿ ಸರಕಾರಕ್ಕೆ ಇರುವ ತೊಂದರೆಗಳೇನು; ಈ ಸಮಸ್ಯೆಯನ್ನು ಪರಿಹರಿಸಲು ಸರಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ? | ಸಾರ್ವಜನಿಕ ನೇಮಕಾತಿ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ವಿದ್ಯುತ್ ವಿತರಣಾ ಸಂಸ್ಥೆಗಳ ವ್ಯಾಪ್ತಿಯ ಜಿಲ್ಲಾ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಗೆ ಸೀಮಿತಗೊಳಿಸುವುದು ಭಾರತ ಸಂವಿಧಾನದ ಅನುಚ್ಛೇದ-16 ಕ್ಕೆ ವಿರುದ್ಧವಾಗಿರುತ್ತದೆ. ಆದ್ದರಿಂದ ಈ ರೀತಿಯ ನೇಮಕಾತಿಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಸಂಖ್ಯೆ: ಎನರ್ಜಿ 281 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಂಜುನಾಥ ಭಂಡಾರಿ ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 26ಕ್ಕೆ ಅನುಬಂಧ:**

ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಕ್ಟೋಬರ್-2025ರ ಅಂತ್ಯಕ್ಕಿರುವಂತೆ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು:

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ: (ಅಕ್ಟೋಬರ್-2025ರ ಅಂತ್ಯಕ್ಕಿರುವಂತೆ)**

| ಗ್ರೂಪ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| ಎ | 661 | 538 | 123 |
| ಬಿ | 1086 | 825 | 261 |
| ಸಿ | 9718 | 6318 | 3400 |
| ಡಿ | 13139 | 6158 | 6981 |
| ಒಟ್ಟು | **24604** | **13839** | **10765** |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ: (ಅಕ್ಟೋಬರ್-2025ರ ಅಂತ್ಯಕ್ಕಿರುವಂತೆ)**

| ಗ್ರೂಪ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| ಎ | 274 | 200 | 74 |
| ಬಿ | 377 | 236 | 141 |
| ಸಿ | 2844 | 2050 | 794 |
| ಡಿ | 5753 | 2731 | 3022 |
| **ಒಟ್ಟು** | **9248** | **5217** | **4031** |

**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ: (ಅಕ್ಟೋಬರ್-2025ರ ಅಂತ್ಯಕ್ಕಿರುವಂತೆ)**

| ಗ್ರೂಪ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| ಎ | 280 | 218 | 62 |
| ಬಿ | 335 | 270 | 65 |
| ಸಿ | 3178 | 2472 | 706 |
| ಡಿ | 6609 | 3414 | 3195 |
| **ಒಟ್ಟು** | **10402** | **6374** | **4028** |

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:**

| ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|
| 6597 |

**ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ:**

| ಗ್ರೂಪ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| ಎ | 365 | 271 | 94 |
| ಬಿ | 423 | 355 | 68 |
| ಸಿ | 3515 | 2870 | 645 |
| ಡಿ | 5895 | 3880 | 2015 |
| **ಒಟ್ಟು** | **10198** | **7376** | **2822** |